# ರಾಮನಗರ ಜಿಲ್ಲಾ ಪೊಲೀಸ್

---

ಪೊಲೀಸ್ ಅಧೀಕ್ಷಕರ ಕಛೇರಿ
ರಾಮನಗರ ಜಿಲ್ಲೆ ರಾಮನಗರ
ದಿನಾಂಕ:03-03-2021

## ಪತ್ರಿಕಾ ಪ್ರಕಟಣೆ

**ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯ ಮೊ.ಸಂ-44/2021, ಕಲಂ-8, 20(ಎ), 20(ಬಿ) NDPS ACT-1985 ಮತ್ತು ಕಲಂ-09, 27, 29, 39, 44, 49(ಬಿ) 49(ಸಿ), 51 WLP ACT-1972 ಜೊತೆಗೆ 379 ಐಪಿಸಿ.**

ದಿನಾಂಕ-03.03.2021 ರಂದು ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಎಸ್.ಐ ಅನಂತರಾಮ್ ರವರು ಬೆಳಗ್ಗೆ 9.00 ಗಂಟೆಯಲ್ಲಿ ಪೋಲೀಸ್ ಠಾಣೆಯಲ್ಲಿದ್ದಾಗ, ಶಿವನಹಳ್ಳಿ-ಟಿ.ಬೇಕುಪ್ಪೆ ರಸ್ತೆಯಲ್ಲಿ ಯಾರೋ ಇಬ್ಬರು ಆಸಾಮಿಗಳು ಗಾಂಜಾ ಸೊಪ್ಪನ್ನು ಮಾರಾಟ ಮಾಡಲು ಬಂದಿರುತ್ತಾರೆಂದು ಬಂದ ಖಚಿತ ಮಾಹಿತಿ ಮೇರೆಗೆ, ಮಾನ್ಯ ಎಸ್ ಗಿರೀಶ್ ಐ.ಪಿ.ಎಸ್, ಪೊಲೀಸ್ ಅಧಿಕ್ಷಕರು, ರಾಮನಗರ ಜಿಲ್ಲೆ ರವರ ಮಾರ್ಗದರ್ಶನದಲ್ಲಿ, ಚನ್ನಪಟ್ಟಣ Dysp ಕೆ.ಎನ್.ರಮೇಶ್ ರವರ ನೇತೃತ್ವದಲ್ಲಿ, ಕನಕಪುರ ವೃತ್ತದ ಸಿ.ಪಿ.ಐ ಟಿ.ಟಿ ಕೃಷ್ಣ ರವರ ಅಪರಾಧ ವಿಭಾಗದ ತಂಡ ಹಾಗೂ ಪಿ.ಎಸ್.ಐ ಆನಂತರಾಮ್ ಮತ್ತು ಸಿಬ್ಬಂದಿಗಳಾದ ಎ.ಎಸ್.ಐ ಮುನಿರಾಜು, ಪದ್ಮಶಂಕರ್, ಶಿವಶಂಕರ್, ಧನಂಜಯ್, ಮನು, ಜಯಣ್ಣ, ಮುಹದೇವ ಶೆಟ್ಟಿ, ನವೀನ್, ನಿಂಗರಾಜು, ಪುನೀತ್ ಹಾಗೂ ಜೀಪ್ ಚಾಲಕ ವೆಂಕಟರಸು ಹಾಗೂ ಇತರರು ದಾಳಿ ಮಾಡಿ ೯ ಕೆ.ಜಿ ೮೯೦ ಗ್ರಾಂ ತೂಕದ ಸುಮಾರು 7-8 ಲಕ್ಷ ರೂ ಮೌಲ್ಯದ ಗಾಂಜಾ ಸೊಪ್ಪು ಹಾಗೂ 10 ಜಿಂಕೆಯ ಕೊಂಬುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೆ.

### ಆರೋಪಿಗಳ ವಿವರ

1.ವರದಯ್ಯ ಬಿನ್ ಪೊನ್ನಯ್ಯ 55 ವರ್ಷ, ಗೊಲ್ಲರು, ವ್ಯವಸಾಯ, ಪುದನಗರ ಗ್ರಾಮ, ಕೌದಹಳ್ಳಿ ದಾಖಲೆ ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ,

2.ಮುತ್ತುರಾಜು ಬಿನ್ ಲೇಟ್ ಮಾದಯ್ಯ 45 ವರ್ಷ, ವ್ಯವಸಾಯ, ಪುದಿನಗರ ಗ್ರಾಮ, , ಕೌದಹಳ್ಳಿ ದಾಖಲೆ ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ,

ಈ ಪ್ರಕರಣವನ್ನು ಭೇದಿಸುವಲ್ಲಿ ಕನಕಪುರ ವೃತ್ತ ಮಟ್ಟದ ಅಪರಾಧ ತಂಡದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಮಾನ್ಯ ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ, ರಾಮನಗರ ರವರು ಅಭಿನಂದಿಸಿ ನಗದು ಬಹುಮಾನವನ್ನು ಘೋಷಿಸಿರುತ್ತಾರೆ.

